ಸಾಕ್ಷಿಯನ್ನು ದಿನಾಂಕ **02-08-2023** ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ 3 ನೇ ಪ್ರತಿವಾದಿಯರ ಪರ ಶ್ರೀ ಎ ಎನ್ ಜಿ</u>** <u>ವಕೀಲರಿಂದಃ</u>

ನನ್ನ ತಂದೆ ನ್ಯಾಯಾಲಯಕ್ಕೆ ಈ ಹಿಂದೆ ಕೇಸುಗಳಿಗೆ ಸಂಬಂಧಿಸಿದಂತೆ ಬಂದಿಲ್ಲ. ಈ ಕೇಸಿಗೆ ಸಂಬಂಧಿಸಿದಂತೆ ನಮ್ಮ ತಂದೆ ಯಾವತ್ತು ನ್ಯಾಯಾಲಯಕ್ಕೆ ಹಾಜರಾಗಿಲ್ಲ. ನನ್ನ ತಂದೆ ನ್ಯಾಯಾಲಯಕ್ಕೆ ಬಂದು ಪ್ರಮಾಣ ಪತ್ರವನ್ನು ಎಂದಿಗೂ ಸಲ್ಲಿಸಿಲ್ಲ ನನ್ನ ತಂದೆ ವಾದಪತ್ರದ ಜೊತೆ ಸಲ್ಲಿಸಿರುವ ಪ್ರಮಾಣ ಪತ್ರಕ್ಕೆ ಹೆಬ್ಬೆಟ್ಟಿನ ಗುರುತನ್ನು ಹಾಕಿದ್ದರಾ ಎಂದರೆ ಸಾಕ್ಷಿ ನಮ್ಮ ವಕೀಲರ ಬಳಿ ಬಂದಿದ್ದರು ಎಂದು ನುಡಿಯುತ್ತಾರೆ.

2. 3 ನೇ ಪ್ರತಿವಾದಿ ತನ್ನ ಸಹೋದರರ ವಿರುದ್ದ ಓ.ಎಸ್.ನಂ.112/2012 ರ ದಾವೆಯಲ್ಲಿ ಸಲ್ಲಿಸಿದ್ದರು ಎಂದರೆ ಸರಿ. ಆ ಕೇಸು 3 ನೇ ಪ್ರತಿವಾದಿಯರ ಪರ ಡಿಕ್ರಿಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ಆ ಕೇಸು 3 ನೇ ಪ್ರತಿವಾದಿಯ ಪರ ತೀರ್ಪು ಆಗಿರುವ ವಿಚಾರ ತಿಳಿದಿದ್ದರೂ ಸಹ ಆಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಈ ಕೇಸನ್ನು ನನ್ನ ದೊಡ್ಡಪ್ಪನ ಮೇಲೆ ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ನನ್ನ ದೊಡ್ಡಪ್ಪನ ಹೆಸರು ಹಿರಿಯಪ್ಪ. ಹಿರಿಯಪ್ಪ ಈ ಕೇಸಿನಲ್ಲಿ ಪಕ್ಷಗಾರರಲ್ಲ ಎಂದರೆ ಸರಿಯಲ್ಲ.

3. 1982 ರಲ್ಲಿ ನನ್ನ ವಯಸ್ಸು ಎಷ್ಟು ಆಗಿತ್ತು ಎಂದು ನಾನು ಓದಿಲ್ಲದ ಕಾರಣ ಹೇಳಲು ಆಗುವುದಿಲ್ಲ. ಸಾಕ್ಷಿ ಈಗ ನನಗೆ 52 ವರ್ಷ ಆಗಿದೆ ಎಂದು ನುಡಿಯುತ್ತಾರೆ. ನಾನು ಜನಿಸಿದಾಗಿನಿಂದಲೂ ವೈಜಕೂರು ಗ್ರಾಮದಲ್ಲಿ ವಾಸವಾಗಿದ್ದೇನೆ. ನಮ್ಮ ಊರಿನಲ್ಲಿ ಯಾರು ಯಾರಿಗೆ ಎಷ್ಟು ಆಸ್ತಿಗಳು ಇವೆ ಎಂದು ನನಗೆ ತಿಳಿದಿದೆ ಎಂದರೆ ಸರಿ. ಸ.ನಂ.205 ರ 7 ಎಕರೆ 1 ಗುಂಟೆ ಜಮೀನು ಯಾರ ಹೆಸರಿನಲ್ಲಿದೆ ಎಂದರೆ ಸಾಕ್ಷಿ ಏಕ ಕುಟುಂಬದಲ್ಲಿದ್ದಾಗ

ಹಿರಿಯಪ್ಪನವರು ಕುಟುಂಬದ ಹಿರಿಯರಾಗಿ ಆ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ, ನನಗೆ ಅದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈಗಲೂ ಹಿರಿಯಪ್ಪನವರು ನಿಮ್ಮ ಕುಟುಂಬದ ಹಿರಿಯರ ಎಂದರೆ ಸಾಕ್ಷಿ ಅವರೇ ನಮ್ಮ ಕುಟುಂಬದ ಹಿರಿಯರು ಎಂದು ನುಡಿಯುತ್ತಾರೆ. ಹಿರಿಯಪ್ಪ ತೀರಿಕೊಂಡು 4 ವರ್ಷ ಕಳೆದಿದೆ ನಾನು ಆತ ನಮ್ಮ ಕುಟುಂಬದ ಹಿರಿಕ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ಅವರು ತೀರಿಕೊಂಡಿದ್ದಾರೆ, ಅವರೇ ನಮ್ಮ ಕುಟುಂಬದ ಹಿರಿಯರಾಗಿದ್ದರು ಎಂದು ನುಡಿಯುತ್ತಾರೆ. ಈಗ ಕುಟುಂಬದ ಯಜಮಾನಿಕೆಯನ್ನು ನಾನೇ ಮಾಡುತ್ತಿದ್ದೇನೆ.

4. 2 ನೇ ಪ್ರತಿವಾದಿ ನಾಗರಾಜು ನಿಮ್ಮ ಮಾತನ್ನು ಕೇಳುತ್ತಿದ್ದರಾ ಎಂದರೆ ಸಾಕ್ಷಿ 2002 ರಲ್ಲಿ ನಮ್ಮ ತಂದೆ ಮತ್ತು ನಮ್ಮ ದೊಡ್ಡಪ್ಪ ಹಿರಿಯಪ್ಪ ಬೇರೆ ಆಗಿದ್ದೇವು ಎಂದು ನುಡಿಯುತ್ತಾರೆ. ವಿಭಾಗವನ್ನು ಯಾವ ರೀತಿ ಮಾಡಿಕೊಂಡಿದ್ದೀರಿ ಎಂದರೆ ಸಾಕ್ಷಿ ಯಾವುದೇ ವಿಭಾಗ ಆಗಿಲ್ಲ, ಎಲ್ಲಾ ಆಸ್ತಿಗಳು ನಮ್ಮ ದೊಡ್ಡಪ್ಪ ಹಿರಿಯಪ್ಪನ ಹೆಸರಿನಲ್ಲಿವೆ ಇವೆ ಎಂದು ನುಡಿಯುತ್ತಾರೆ. 2002 ರಲ್ಲಿ ಬೇರೆಯಾದಾಗ ನಾವು ಬೇರೆ ಮನೆಯಲ್ಲಿ ವಾಸವಾಗಿದ್ದೇವೆ, ಆ ಮನೆ ನಮ್ಮ ದೊಡ್ಡಪ್ಪನ ಹೆಸರಿನಲ್ಲಿಯೇ ಇದೆ. ನಾವು ವಾಸವಿರುವ ಮನೆಯ ಸಂಖ್ಯೆಯನ್ನು ನಾನು ಓದಿಲ್ಲದ ಕಾರಣ ಹೇಳಲಾಗುವುದಿಲ್ಲ. ಅ ಮನೆಯ ಖಾತೆ ಹಿರಿಯಪ್ಪನ ಹೆಸರಿನಲ್ಲಿ ಬರುತ್ತಿದೆ. ನಾವು ವಾಸವಿರುವ ಮನೆಯಲ್ಲಿ ಪ್ರತಿವಾದಿಗಳಿಗೂ ಸಹ ಭಾಗ ಇರುತ್ತದೆ. ನಾವು ವಾಸವಿರುವ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸೇರಿಸಿದ್ದೇವೆ. ಆ ಮನೆಯನ್ನು ಸ.ನಂ.280 ರಲ್ಲಿ ನಿರ್ಮಿಸಿದ್ದೇವೆ, ಆ ಮನೆಯ ಹೌಸ್‌ಲಿಸ್ಟ್ ಸಂಖ್ಯೆ ಗೊತ್ತಿಲ್ಲ.

5. ಈ ದಾವೆಯನ್ನು 11 ಆಸ್ತಿಗಳ ಮೇಲೆ ಸಲ್ಲಿಸಿದ್ದೇನೆ. ಹೌಸ್‌ಲಿಸ್ಟ್ ನಂ.168 ಹಿರಿಯಪ್ಪನ ಹೆಸರಿನಲ್ಲಿದೆ, ಆ ಮನೆ ಹಳೆಯದಾಗಿ ಬಿದ್ದುಹೋಗಿದೆ. ಹೌಸ್ ಲಿಸ್ಟ್ ನಂ.168 ನಾರಾಯಣಪ್ಪ, ದೊಡ್ಡಕೆಂಪಣ್ಣ ನವರ ಹೆಸರಿನಲ್ಲಿದೆ, ನಾನು ಹೇಳಿದಂತೆ ಹಿರಿಯಪ್ಪನ ಹೆಸರಿನಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಐಟಂ.ನಂ.2 ಸ.ನಂ.279 ಹಿರಿಯಪ್ಪನ ಹೆಸರಿನಲ್ಲಿ ಸ್ವಲ್ಪ ಇದೆ. ಹಿರಿಯಪ್ಪನ ಹೆಸರಿನಲ್ಲಿ 1 ಗುಂಟೆ ಇದೆ, ಉಳಿದ ಆಸ್ತಿಯನ್ನು ಮಾರಾಟ ಮಾಡಿದ್ದಾರೆ. ಹಿರಿಯಪ್ಪನವರು 7-8 ವರ್ಷಗಳ ಹಿಂದೆ ಆ ಉಳಿದ ಜಮೀನನ್ನು ಮಾರಾಟ ಮಾಡಿದ್ದಾರೆ. ಹಿರಿಯಪ್ಪನವರು ಆ ಅಸ್ತಿಯನ್ನು 2002 ಕ್ಕೂ ಮೊದಲೇ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ.

6. ನಿಪಿ 2 ಆರ್ ಟಿ ಸಿ ಯಲ್ಲಿ ಕಂಡು ಬರುವ ಮುನಿಯಪ್ಪ, ಶಿವಣ್ಣ, ಶ್ರೀನಿವಾಸ್, ರಾಜಮ್ಮ, ಕುಳ್ಳಪ್ಪ, ಇತರೆಯವರು 1995 ರಿಂದ 2002 ರ ನಡುವೆ ಅವರ ಹೆಸರಿನಲ್ಲಿ ಬರುತ್ತಿರುವ ವಿಸ್ತೀರ್ಣದ ಜಮೀನನ್ನು ಖರೀದಿಸಿರುತ್ತಾರೆ ಎಂದರೆ ಸಾಕ್ಷಿ ಅದಕ್ಕೂ ಮೊದಲೇ ಆ ವಿಸ್ತೀರ್ಣದ ಆಸ್ತಿಗಳನ್ನು ಕೇವಲ ಗುಂಟೆಗೆ 8 ಸಾವಿರದಂತೆ ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ಅವರುಗಳು ಆ ಆಸ್ತಿಗಳನ್ನು ಖರೀದಿಸುವಾಗ ನನಗೆ ಮತ್ತು ನನ್ನ ತಂದೆಗೆ ಮಾಹಿತಿ ಇತ್ತು ಎಂದರೆ ಸರಿಯಲ್ಲ. ನಿಪಿ 2 ಆರ್ ಟಿ ಸಿ ನಲ್ಲಿ ಇರುವ ವ್ಯಕ್ತಿಗಳನ್ನು ನಾನು ಈ ಕೇಸಿನಲ್ಲಿ ಸೇರಿಸಿಲ್ಲ ಎಂದರೆ ಸರಿ. ಅವರುಗಳನ್ನು ಈ ಕೇಸಿನಲ್ಲಿ ಸೇರಿಸಲು ನನಗೆ ತೊಂದರೆ ಇರಲಿಲ್ಲ.

7. ದಾವಾ ಐಟಂ.ನಂ.3 ಸ.ನಂ.213 ರ ಆರ್ ಟಿ ಸಿ ಯನ್ನು ಪಡೆದಾಗ ಆ ಜಮೀನು ಮುನಿಯಪ್ಪ, ಮುನಿಕೆಂಪಣ್ಣನ ಹೆಸರಿನಲ್ಲಿ ಜಂಟಿಯಾಗಿತ್ತು. ನಿಪಿ 3 ರಲ್ಲಿ ನಾನು ಹೇಳಿದಂತೆ ಮುನಿಕೆಂಪಣ್ಣನವರ ಹೆಸರಿನಲ್ಲಿಲ್ಲ, ಲಕ್ಷಮ್ಮ, ಗೋಪಾಲಕೃಷ್ಣ, ನಾರಾಯಣಸ್ವಾಮಿ ಇತರರ

ಹೆಸರಿನಲ್ಲಿದೆ ಎಂದರೆ ಸಾಕ್ಷಿ ಅವರು ಮುನಿಕೆಂಪಣ್ಣ ನವರ ಸೊಸೆ ಮತ್ತು ಮಕ್ಕಳು ಎಂದು ನುಡಿಯುತ್ತಾರೆ. ಅವರುಗಳನ್ನು ನನ್ನ ತಂದೆಯ ಸಂಬಂಧಿಕರು. ಅವರುಗಳನ್ನು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ಅವರುಗಳನ್ನು ಆಸ್ತಿಯಲ್ಲಿ ಭಾಗ ಬೇಕು ಎಂದು ಕೇಳಿದ್ದೇನೆ. ಅವರುಗಳನ್ನು ನಾನು ಭಾಗ ಕೇಳಿಲ್ಲ, ಭಾಗ ಕೇಳಿದ್ದರೆ ಅವರನ್ನು ಸಹ ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ಓದದೇ ಇರುವುದರಿಂದ ಈ ಕೇಸಿನಲ್ಲಿ ಕಾಣಿಸಿರುವ ಸರ್ವೇನಂಬರ್ ಗಳ ಸಂಖ್ಯೆಯನ್ನು ಹೇಳಲಾಗುವುದಿಲ್ಲ.

8. ದಾವಾ ಆಸ್ತಿಗಳು ನಮ್ಮ ಒಟ್ಟು ಕುಟುಂಬದ ಆಸ್ತಿಗಳು ಎಂದು ಓದಿದವರ ಬಳಿ ತಿಳಿದುಕೊಂಡಿದ್ದೇನೆ. ಯಾರು ತಿಳಿಸಿದರು ಎಂದು ನನಗೆ ನೆನಪಿಲ್ಲ. ದಾವಾ ಆಸ್ತಿಗಳಲ್ಲಿ ನನ್ನ ದೊಡ್ಡಪ್ಪ ಖರೀದಿಸಿದ ಆಸ್ತಿ ಮತ್ತು ನನ್ನ ಅಜ್ಜನ ಆಸ್ತಿಗಳು ಸಹ ಒಳಗೊಂಡಿವೆ. ನಮ್ಮ ಹಿರಿಯರಿಂದ ಬಂದ ಆಸ್ತಿಗಳ ಪತ್ರಗಳು ಮತ್ತು ನನ್ನ ದೊಡ್ಡಪ್ಪ ಖರೀದಿಸಿದ ಆಸ್ತಿಗಳ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ನಮ್ಮ ವಕೀಲರಿಗೆ ನೀಡಿದ್ದೇನೆ ಎಂದು ನುಡಿಯುತ್ತಾರೆ. ನಾನು ಹೇಳುವಂತೆ ಯಾವುದೇ ದಾಖಲೆಯನ್ನು ವಕೀಲರಿಗೆ ನೀಡಿಲ್ಲ, ಆ ರೀತಿಯ ಯಾವುದೇ ದಾಖಲೆಗಳು ಇಲ್ಲದೇ ಇದ್ದರೂ ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಾಖಲೆಗಳು ಇದ್ದರೆ ನ್ಯಾಯಾಲಯಕ್ಕೆ ಹಾಜರುಪಡಿಸುತ್ತೀರಾ ಎಂದರೆ ಸಾಕ್ಷಿ ಆ ದಾಖಲೆಗಳು ನನ್ನ ದೊಡ್ಡಪ್ಪನ ಬಳಿ ಇವೆ ಎಂದು ನುಡಿಯುತ್ತಾರೆ.

9. 1982 ರಲ್ಲಿಯೇ ನನ್ನ ತಂದೆ ಮತ್ತು ನನ್ನ ದೊಡ್ಡಪ್ಪ ಹಿರಿಯಪ್ಪ ಮುಜುಬಾನೆ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸುಳ್ಳು, ಮುಜುಬಾನೆ ವಿಭಾಗದ ಪ್ರಕಾರ ನನ್ನ ತಂದೆ ಮುನಿಯಪ್ಪನವರಿಗೆ ಸ.ನಂ.205 ರಲ್ಲಿ 1 ಎಕರೆ 1 ಗುಂಟೆ, ಸ.ನಂ.213/1 ರಲ್ಲಿ 17 ವರೆ

ಗುಂಟೆ, ಸ.ನಂ.91/2 ರಲ್ಲಿ 10 ಗುಂಟೆ, ಸ.ನಂ.291/4 ರಲ್ಲಿ 8 ಗುಂಟೆ ಜಮೀನುಗಳು ಬಂದಿದ್ದವು ಎಂದರೆ ಸುಳ್ಳು ಆ ವಿಭಾಗದ ಪ್ರಕಾರ ನನ್ನ ತಂದೆಯ ಹೆಸರಿಗೆ ಆ ಜಮೀನುಗಳ ಖಾತೆಗಳು ಆಗಿವೆ ಎಂದರೆ ಸುಳ್ಳು ಆ ವಿಭಾಗದಂತೆ ನಾವು ಆ ಜಮೀನಿನ ಸ್ವಾಧೀನದಲ್ಲಿ ಇದ್ದೇವೆ ಎಂದರೆ ಸುಳ್ಳು ನನ್ನ ತಂದೆ 2020 ರಲ್ಲಿ ತೀರಿಕೊಂಡರು. ನನ್ನ ತಂದೆ ತೀರಿದ ಬಳಿಕ ನನ್ನ ತಾಯಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ. ನನ್ನ ತಾಯಿಗೆ ಆರೋಗ್ಯ ಸರಿ ಇಲ್ಲದ ಕಾರಣ ಅವರನ್ನು ಸೇರಿಸಿಲ್ಲ. ಈಗಾಗಲೇ ವಿಭಾಗ ಆಗಿದ್ದರಿಂದ ನನ್ನ ತಾಯಿ ಸಹಿ ಮಾಡಲು ಒಪ್ಪದ ಕಾರಣ ಅವರನ್ನು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸುಳ್ಳು

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.**

ನನ್ನ ಉಕ್ತಲೇಖನದ ರೀತ್ಯಾತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿಂತಾಮಣಿ